ಉತ್ತರ

ಅ) ಮಂಡ್ಯ ಜಿಲ್ಲೆಯ ವಯಸ್ಕರ ಶಿಕ್ಷಣ ಇಲಾಖೆಯು ಸರಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಉದ್ಭವಿಸುವುದಿಲ್ಲ.

ಆ) ಶಾಖಾ ಗ್ರಂಥಾಲಯ - 1

ಗ್ರಾಮ ಪಂಚಾಯತ್ ಗ್ರಂಥಾಲಯಗಳು - 15.

ಮುಂದೆ ಮಂಜೂರಾಗಬೇಕಾದ ಗ್ರಂಥಾಲಯಗಳು:

1) ಹೊನ್ನಾವರ

2) ಕಾಂತಾಪುರ

3) ಪಾಲಗ್ರಹಾರ

4) ಹೊಣಕೆರೆ

5) ದೊಡ್ಡಬಾಲ

6) ಬ್ರಹ್ಮದೇವರಹಳ್ಳಿ

7) ಕರಡಿ ಹಳ್ಳಿ

8) ಮಣ್ಣಹಳ್ಳಿ

ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಇಲಾಖೆಯಲ್ಲಿನ ಲಿಪಿಕ ನೌಕರರ ಜೇಷ್ಠತಾಪಟ್ಟಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1192(1373)

ಸದಸ್ಯರ ಹೆಸರು: ಶ್ರೀ ಚಲುವರಾಯ ಸ್ವಾಮಿ.ಎನ್(ನಾಗಮಂಗಲ)

ಉತ್ತರಿಸುವವರು: ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಪ್ರಶ್ನೆ

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಲಿಪಿಕ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರ ಜೇಷ್ಟತಾ ಪಟ್ಟಿ ತಯಾರಿಸಿದೆಯೇ?

ಆ) ತಯಾರಿಸಿದ್ದಲ್ಲಿ, ಜೇಷ್ಟತೆ ಆಧಾರದ ಮೇಲೆ ಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗಿದೆಯೇ?

ಇ) ಜೇಷ್ಟತೆ ಪಟ್ಟಿ ತಯಾರಿಸದಿದ್ದಲ್ಲಿ, ಪಟ್ಟಿ ತಯಾರಿಸಲು ಸರ್ಕಾರದ ಕ್ರಮವೇನು?

ಉತ್ತರ

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಪರಿಷ್ಕರಿಸುವ ಪ್ರಕ್ರಿಯೆ ನಡೆಯುತ್ತಿದೆ. ಪ್ರಕ್ರಿಯೆ ಮುಗಿದ ಕೂಡಲೇ ಜೇಷ್ಟತಾ ಪಟ್ಟಿಯನ್ನು ತಯಾರಿಸಲು ಕ್ರಮ ಜರುಗಿಸಲಾಗುವುದು.

ಶಿವಮೊಗ್ಗ ಸರ್ಕಾರಿ ಮೆಗ್ಗಾನ್ ಆಸ್ಪತ್ರೆಯಲ್ಲಿ ಹೃದಯ ಚಿಕಿತ್ಸೆ ಹಾಗೂ ಕ್ಯಾನ್ಸರ್ ಚಿಕಿತ್ಸೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1093(1083)

ಸದಸ್ಯರ ಹೆಸರು: ಶ್ರೀ ಚಂದ್ರಶೇಖರಪ್ಪ.ಹೆಚ್.ಎಂ(ಶಿವಮೊಗ್ಗ)

ಉತ್ತರಿಸಬೇಕಾದ ಸಚಿವರು: ಡಾ॥ಎ.ಬಿ.ಮಲಕಾರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ಶಿವಮೊಗ್ಗ ಸರ್ಕಾರಿ ಮೆಗ್ಗಾನ್ ಆಸ್ಪತ್ರೆಗೆ ಹೃದಯ ಚಿಕಿತ್ಸೆ ಹಾಗೂ ಕ್ಯಾನ್ಸರ್ ಕಾಯಿಲೆಯ ಚಿಕಿತ್ಸೆಯ ಬಗ್ಗೆ ಹೆಚ್ಚಿನ ಪ್ರಕರಣಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?